

## ಶತಮಾನ ಉರುಳಿದರೂ ಮಾಸದ ಚೆಲುವು

# ಟರ್ಟನ್ ಉಡುಪು ಟ್ರೆಂಡ್

■ ಸುರೇಖಾ ಹೆಗಡೆ

ಗಾಢ ಬಣ್ಣದ ಫ್ರಾಕ್ ಮೇಲೆ ಅಡ್ಡಡ್ಡ ಗೆರೆಗಳ, ಚೌಕುಳಿಯ ಸೀಕ್ವೆನ್ಸ್ ಇರುವ ಉಡುಪು ಈಗಿನ ಟ್ರೆಂಡ್. ಪುಟಾಣಿ ಗೆರೆಗಳ ನೇರ ಎಳೆಯ ತೋರಣವಿರುವ ಸುಂದರ ಡ್ರೆಸ್. ಕಂಡಾಗಲೆಲ್ಲ ಮೆಚ್ಚಿಕೊಳ್ಳುವಂತೆ ಮಾಡುವ ಸೆಳೆತ ಆದರದ್ದು. ಅದೇ ಟರ್ಟನ್ ವಿನ್ಯಾಸ. ಒಂದಲ್ಲ ಒಂದು ರೀತಿಯಲ್ಲಿ ಫ್ಯಾಷನ್ ಅಂಗಳದಲ್ಲಿ ಅಸ್ತಿತ್ವವನ್ನು ಉಳಿಸಿಕೊಂಡೇ ಇರುವ ಟರ್ಟನ್ ಫ್ಯಾಷನ್ ಲೋಕದಲ್ಲಿ ಮತ್ತೆ ಸದ್ದು ಮಾಡುತ್ತಿದೆ. ಟ್ರೆಂಡ್ ಆಗಿ ವಿಜೃಂಭಿಸುತ್ತಿದೆ.